ಅಧ್ಯಕ್ಷರು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ದಿನಾಂಕ 29ನೇ ಜನವರಿ 2007ರಂದು 1ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 10 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 41 ಪ್ರಶ್ನೆಗಳ ಪೈಕಿ 30 ಉತ್ತರಗಳನ್ನು ಹಾಗೂ ದಿನಾಂಕ 31ನೇ ಜನವರಿ 2007ರಂದು 2ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ5 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 30 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಹಾಗೂ ದಿನಾಂಕ 0–2–02–2007ರಂದು 4ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 51 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು (ಅನುಬಂಧ–1)

3 ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ (ಎರಡನೇ ಪಟ್ಟಿ)

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

I ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ) ಅವರ ಪರವಾಗಿ ಮಾನ್ಯ ಅಧ್ಯಕ್ಷರೆ,

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಪರಿಚ್ಛೇದ 12(7)ರ ಅನ್ವಯ

1 ಶ್ರೀ ಮಹ್ಮದ್ ಖಲೀಮುಲ್ಲಾ ಕೆ ಎ ಎಸ್, ಅಧಿಕಾರಿ ಅವರಿಗೆ ಸಂಬಂಧಿಸಿದಂತೆ ಸನ್ಮಾನ್ಯ ಉಪ ಲೋಕಾಯುಕ್ತರವರು ಸಲ್ಲಿಸಿದ ವಿಶೇಷ ವರದಿ ಹಾಗೂ ವಿವರಣಾತ್ಮಕ ಟಿಪ್ಪಣಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಪೋಲಿಸ್ ಗೃಹ ನಿರ್ಮಾಣ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ

1 ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ

3 ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

4 ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ

5 ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ

6 ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ

7 ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ

8 ಕೆ ಜಿ ಎಫ್, ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ

9 ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

10 ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

11 ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

12 ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

13 ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

14 ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

15 ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

16 ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

17 ರಾಮನಗರ ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ

2 ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ

1964ರ ಬೆಂಗಳೂರು ಜಲಮಂಡಳಿಯ ಅಧಿನಿಯಮ 17(1)ರ ಪ್ರಕರಣದ ಮೇರೆಗೆ

1 ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2005–06ನೇ ಸಾಲಿನ ವಾರ್ಷಿಕ ವರದಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಶ್ರೀ ಕಂಠೀರವ ಸ್ಟುಡಿಯೋ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

3 ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

II ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

1951ರ ರಾಜ್ಯ ಹಣಕಾಸು ಸಂಸ್ಥೆ ಕಾಯ್ದೆ ಕಲಂ 37(7) ಮತ್ತು 38(3)ರ ಮೇರೆಗೆ

1 ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ 2005–06ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

III ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ಅಧ್ಯಕ್ಷರೆ,

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 25ರನ್ವಯ

1 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನ ಗುಡಿ, ಶಹಾಪುರ ಗುಲ್ಬರ್ಗಾದ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ

3 ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿಯ 2005–06ನೇ ಸಾಲಿನಲೆಕ್ಕಪರಿಶೋಧನಾ ವರದಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕಾವೇರಿ ನೀರಾವರಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಕೃಷ್ಣ ಭಾಗ್ಯಜಲ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

IV ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ರವರ ಪರವಾಗಿ ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

3 ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

4 ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

5 ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

6 ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

7 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ (ಗೃಹ ಸಚಿವರು)

V ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ,

2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮದ 50(2)ರ ಮೇರೆಗೆ

1 ಮೈಸೂರು ವಿಶ್ವವಿದ್ಯಾನಿಲಯದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪತ್ರಗಳು

2 ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿಯ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

3 ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು 2003–04ನೇ 2004–05ನೇ ಸಾಲುಗಳ ಲೆಕ್ಕಪರಿಶೋಧನಾ ವರದಿ

4 ಮಂಗಳೂರು ವಿಶ್ವವಿದ್ಯಾಲಯ ಮಂಗಳಗಂಗೋತ್ರಿಯ 2005–06ನೇ ಸಾಲಿನ ವಾರ್ಷಿಕ ವರದಿ

5 ಗುಲ್ಬರ್ಗಾ ವಿಶ್ವವಿದ್ಯಾಲಯದ 2004–05ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ಹಾಗೂ ಅನುಪಾಲನಾ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

VI ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯ ರಸ್ತೆ ಸಂಸ್ಥೆಯ 1950ರ ಅಧಿನಿಯಮ 33(2), 35ರ ಪ್ರಕರಣದ ಮೇರೆಗೆ

1 ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಶಾಂತಿನಗರ, ಬೆಂಗಳೂರಿನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿ

2 ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾದ 2005–06ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ವರದಿ

3 ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿಯ 2005–06ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

VII ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತ (ಕಿಯೋನಿಕ್ಸ್)ದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುವುದು

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

VIII ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಭೂಸೇನಾ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ

1 ಕೋಲಾರ ಜಿಲ್ಲಾಪಂಚಾಯತ್‌ನ 2003–04ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ

2 ಉತ್ತರ ಕನ್ನಡ ಜಿಲ್ಲಾಪಂಚಾಯತ್, ಕಾರವಾರದ 2003–04ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ

3 ವಿಜಾಪುರ ಜಿಲ್ಲಾಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ

4 ದಾವಣಗೆರೆ ಜಿಲ್ಲಾಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ

5 ಧಾರವಾಡ ಜಿಲ್ಲಾಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ

6 ಶಿವಮೊಗ್ಗ ಜಿಲ್ಲಾಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ

7 ರಾಯಚೂರು ಜಿಲ್ಲಾಪಂಚಾಯತ್‌ನ 2003–04ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ತನಿಖಾ ವರದಿ

8 ಬೀದರ್ ಜಿಲ್ಲಾಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ವರದಿ

9 ಬೆಂಗಳೂರು ನಗರ ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ

10 ಬಾಗಲಕೋಟೆ ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿ

11 ಮೈಸೂರು ಜಿಲ್ಲಾಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ

12 ಬಳ್ಳಾರಿ ಜಿಲ್ಲಾಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ

13 ಚಿಕ್ಕಮಗಳೂರು ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ

14 ಚಿತ್ರದುರ್ಗ ಜಿಲ್ಲಾಪಂಚಾಯತ್‌ನ 2004–05ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ

1993 ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 253(3)ನೇ ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯದ ತಾಲ್ಲೂಕು ಪಂಚಾಯತ್‌ಗಳ 1999–2000ನೇ ಮತ್ತು 2000–01ನೇ ಸಾಲುಗಳ ವಾರ್ಷಿಕ ಲೆಕ್ಕಗಳ ಕ್ರೋಢೀಕೃತ ಪ್ರತ್ಯೇಕ ಆಡಿಟ್ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

IX ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ

1966ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿನಿಯಮ 25(3)ರ (ತಿದ್ದುಪಡಿ ಅಧಿನಿಯಮ) ಪ್ರಕರಣದ ಮೇರೆಗೆ

1 ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

X ಶ್ರೀ ಗೋವಿಂದ ಎಂ ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

XI ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೇ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಕರ್ನಾಟಕ ಟ್ರಸ್ಟಿ ಕಂಪನಿ ನಿಯಮಿತ, ಬೆಂಗಳೂರು 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

3 ಮೈಸೂರು ಪೇಪರ್‌ಮಿಲ್ಸ್ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

4 ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

5 ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ನಿಯಮಿತ, ಬೆಂಗಳೂರಿನ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

6 ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2002–03ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

7 ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

8 ದಿ ಮೈಸೂರು ಕ್ರೋಮ್‌ಟ್ಯಾನಿಂಗ್ ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

9 ದಿ ಮೈಸೂರು ಲ್ಯಾಂಪ್ಸ್ ವರ್ಕ್ಸ್ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

10 ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಮತ್ತು ಏಜೆನ್ಸೀಸ್ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

11 ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

12 ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

13 ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

XII ಶ್ರೀ ಬಂಡೆಪ್ಪ ಕಾಶಂಪೂರ (ಮಾನ್ಯ ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ

1963ರ ಕೃಷಿ ವಿಶ್ವವಿದ್ಯಾಲಯದ ಕಾಯ್ದೆ ಕಲಂ 38(3)ರ ಮೇರೆಗೆ

1 ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ

2 ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಮೈಸೂರು ಟೊಬ್ಯಾಕೋ ಕಂಪನಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

2 ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

XIII ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು) ಅವರು ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ

2 ಶ್ರೀ ಕಂಠೀರವ ಸ್ಟುಡಿಯೋ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

XIV ಶ್ರೀ ಬಾಲಚಂದ್ರ ಜಾರಕಿಹೋಳಿ (ಸಮಾಜ ಕಲ್ಯಾಣ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಡಾ ಬಿ ಆರ್ ಅಂಬೇಡ್ಕರ್ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

XV ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರಿನ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

XVI ಶ್ರೀ ಎಸ್ ಎ ರವೀಂದ್ರನಾಥ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ದಿ ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

XVII ಶ್ರೀ ರೇವು ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನೆ ಸಚಿವರು) ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರಿನ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳ ವರದಿ ಹಾಗೂ 2005–06ನೇ ಸಾಲಿನ ವಾರ್ಷಿಕ ವರದಿ

2 ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

XVIII ಶ್ರೀ ಶಿವಾನಂದ ಎನ್ ನಾಯಕ್ (ಸಣ್ಣ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು)

XIX ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) ಪರವಾಗಿ ಮಾನ್ಯ ಅಧ್ಯಕ್ಷರೆ

1962ರ ಉಗ್ರಾಣ ನಿಗಮ ಕಾಯ್ದೆಯ 31(11) ಪ್ರಕರಣದ ಮೇರೆಗೆ

1 ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 2005–06ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ

XX ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು) ಮಾನ್ಯ ಅಧ್ಯಕ್ಷರೆ,

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗ

1 ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ

2 ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಪಾಪ ಅವರಿಗೆ ಪುರುಸೊತ್ತು ಇಲ್ಲವೆಂದು ಕಾಣುತ್ತದೆ

ಅಧ್ಯಕ್ಷರು ಮಾನ್ಯ ಜಿ ಟಿ ದೇವೇಗೌಡರ ಹೆಸರಿನ ಮುಂದಿರುವ ಕಾಗದ ಪತ್ರಗಳು

ಶ್ರೀ ವಾಟಾಳ್ ನಾಗರಾಜ್ ಅದನ್ನು ಹೇಳದೇ ಹೋದರೆ ನಡೆದುಹೋಗುತ್ತದೆ ಸುಮ್ಮನೆ ಅವರ ಹೆಸರನ್ನು ಹೇಳದೆ ಹೋದರೂ ಕೂಡ ಆಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಸುಮ್ಮನೆ ತಾವೇ ಎಲ್ಲವನ್ನು ಹೇಳಿಬಿಟ್ಟರೆ ಆಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಎಲ್ಲರ ಪತ್ರದ ಮೂಲಕ ಬಂದಿರುವ ಪತ್ರಗಳನ್ನು ಸಭೆಯ ಮುಂದಿಡುತ್ತೇನೆಂದು ಹೇಳಿಬಿಡಿ ಸ್ವಾಮಿ

ಶ್ರೀ ಎಂ ಪಿ ಪ್ರಕಾಶ್(ಗೃಹ ಸಚಿವರು) ಇವೆಲ್ಲವೂ ಅಗಲೇಬೇಕಾಗಿರುವಂತಹ ಕರ್ತವ್ಯಗಳಾಗಿದೆ ಅವು ನೋಡುವ್ಗುದಕ್ಕೆ rituals ಎಂದುಕೊಂಡರೂ ಕೂಡ ನಿಯಮಾವಳಿಗಳ ಪ್ರಕಾರ ಅದನ್ನು ಹೇಳಲೇಬೇಕಾಗುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ ಸೌಜನ್ಯ ಯಾರ್ಯಾರಿಗೆ ಇಲ್ಲವೆಂದು ಅವರು ನಿಮಗೆ ಬರೆದು ಕೊಡಬೇಕಲ್ಲ ತಾವು ಸಭೆಯಲ್ಲಿ ನಿಂತುಕೊಂಡು, ಹಿಂದಕ್ಕೆ ನೋಡುವುದು ಮಾಡಿದರೆ ಸಭೆಗೆ ಏನಾಗುತ್ತದೆ

ಶ್ರೀ ಎಂ ಪಿ ಪ್ರಕಾಶ್ ಅದಕ್ಕೋಸ್ಕರವೇ ಅವರು ಹೇಳಿರುವುದು

ಶ್ರೀ ಜೆ ಸಿ ಮಾಧುಸ್ವಾಮಿ Speakerರವರು ಇಂತಹವರ ಕಾಗದ ಪತ್ರಗಳನ್ನು ನಾನು ಮಂಡಿಸುತ್ತೇನೆಂದರೆ ಸಮಸ್ಯೆಯು ಬಗೆಹರಿಯಿತಲ್ಲ ಕನಿಷ್ಟ ಅವರು ನಿಮಗೆ ಬರೆದುಕೊಡಬೇಕಲ್ಲವೇ ? ಇಂತಹವರು ಇಲ್ಲ, ಇಂತಹವರ ಕಾಗದಪತ್ರಗಳನ್ನು ತಾವು ಇಡಿ, ಇಂತಹವರು ಇದ್ದಾರೆಂದು ಹೇಳುವ ಸೌಜನ್ಯ ಇರಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಪ್ರಕಾಶ್ ರವರೆ, ಎಲ್ಲರ ಹೆಸರನ್ನು ಹೇಳಿ, ಇವರ ಮುಂದಿರುವಂತಹ ಕಾಗದಪತ್ರಗಳನ್ನು, ಇವರ ಮುಂದಿರುವಂತಹ ಕಾಗದಪತ್ರಗಳನ್ನು ಎಂದು ಹೇಳಿದರೆ, ಏನು ದೇವಸ್ಥಾನದಲ್ಲಿ ಹೋಗಿ ಫಸ್ಟ್ ನಮಗೆ ನಾಮ ನಿಮ್ಮ ಹೆಸರು ಏನು ಸ್ವಾಮಿ? ಮಾನ್ಯ ಪ್ರಕಾಶ್ ರವರಿಗೆ ಒಳ್ಳೆಯದಾಗಲಿ, ನಿಮ್ಮ ಮನೆಯವರು , ಅವರಿಗೆ ಒಳ್ಳೆಯದಾಗಲಿ, ನಿಮ್ಮ ಮಕ್ಕಳು , ಅವರಿಗೆ ಒಳ್ಳೆಯದಾಗಲಿ, ಈ ರೀತಿಯಾಗಿ ದೇವಸ್ಥಾನದ ತರಹ ಹೇಳಿದರೆ ಹೇಗೇ?

ಅಧ್ಯಕ್ಷರು ಇದಕ್ಕೆ ನಿಯಮಾವಳಿಗಳು ಇದೆ ಸ್ವಾಮಿ

ಶ್ರೀ ವಾಟಾಳ್ ನಾಗರಾಜ್ ಏನಿದು , ಇದು ಸರಿಯಲ್ಲ

ಶ್ರೀ ಎಂ ಪಿ ಪ್ರಕಾಶ್ ಈಗ ದೇವಸ್ಥಾನದಲ್ಲಿ ನಿಜವಾದ ವರವನ್ನು ದೇವರಿಂದ ಪಡೆಯಬೇಕಾಗಿರುತ್ತದೆ ಪ್ರತಿಯೊಬ್ಬರ ಹೆಸರಿನಲ್ಲಿ ನಾಮಸ್ಮರಣೆಯನ್ನು ಮಾಡಿ ಗೋತ್ರಗಳನ್ನು ಕೇಳಿ ಮಂತ್ರಗಳ ಮೂಲಕ ಆಶೀರ್ವಾದವನ್ನು ಮಾಡುತ್ತಾರೆ ಹಾಗೆಯೇ ಇಲ್ಲಿ ನಿಯಮಾವಳಿಗಳ ಪ್ರಕಾರ ಇದನ್ನು ಮಾಡಲೇಬೇಕಾದ ritual ಇದೆ ಸನ್ಮಾನ್ಯ ಜಿ ಟಿ ದೇವೇಗೌಡರ ಹೆಸರಿನ ಮುಂದಿರುವ ಕಾಗದ ಪತ್ರವನ್ನು ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

4 ವರದಿಗಳನ್ನೊಪ್ಪಿಸುವುದು

ಶ್ರೀ ಶಕುಂತಳಾಶೆಟ್ಟಿ(ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ) ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯು ಬಾಲಭವನ, ಮಹಿಳಾ ಅಭಿವೃದ್ಧಿ ನಿಗಮ ಹಾಗೂ ಮಹಿಳಾ ಆಯೋಗದ ಕಾರ್ಯಚಟುವಟಿಕೆಗಳ ಬಗ್ಗೆ 2001–02ನೇ ಸಾಲಿನಲ್ಲಿ ನೀಡಿದ್ದ 15ನೇ ವರದಿಯ ಶಿಫಾರಸ್ಸುಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಮೇಲಿನ ಅನುಸರಣಾ ವರದಿಯನ್ನು ಒಪ್ಪಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

ಆ) **ಶ್ರೀ ಎನ್ ಯೋಗೀಶ್ ಭಟ್ (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ)** ಮಾನ್ಯ ಅಧ್ಯಕ್ಷರೇ 2005–06ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 32ನೇ ವರದಿಯನ್ನು ಮಂಡಿಸುತ್ತಿದ್ದೇನೆ

ಅಧ್ಯಕ್ಷರು – ಮಂಡಿಸಲಾಯಿತು

ಇ) **ಶ್ರೀ ವಿಶ್ವನಾಥ್(ಜಿ ಬಸವಣ್ಣೆಪ್ಪ,ಅಧ್ಯಕ್ಷರು, ಹಕ್ಕು ಬಾಧ್ಯತೆಗಳ ಸಮಿತಿ ಇವರ ಪರವಾಗಿ)** 2006–07ನೇ ಸಾಲಿನ ಹಕ್ಕುಬಾಧ್ಯತೆಗಳ ಸಮಿತಿಯ ಮೊದಲನೇ ಹಾಗೂ ಎರಡನೇ ವರದಿಗಳನ್ನು ಮಂಡಿಸುತ್ತಿದ್ದೇನೆ

ಅಧ್ಯಕ್ಷರು – ಮಂಡಿಸಲಾಯಿತು

ಈ) **ಶ್ರೀ ಹೆಚ್ ಡಿ ಬಸವರಾಜು (ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ)** 2004–05ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಎರಡನೇ ವರದಿಯನ್ನು ಮಂಡಿಸುತ್ತಿದ್ದೇನೆ

ಅಧ್ಯಕ್ಷರು – ಮಂಡಿಸಲಾಯಿತು

ಅಧ್ಯಕ್ಷರು – ಶ್ರೀರಾಮರೆಡ್ಡಿಯವರೇ, ಈಗ ಒಂದು ನಿಲುವಳಿ ಸೂಚನೆ ಇದೆ ಇದಾದ ಮೇಲೆ ಬೇರೆ ವಿಷಯವನ್ನು ತೆಗೆದುಕೊಳ್ಳೋಣ

ಶ್ರೀ ಜೆ ಸಿ ಮಾಧುಸ್ವಾಮಿ – ನಿಯಮ 69 ಕ್ಕೆ ತಾವು ಕನ್ವರ್ಟ್ ಮಾಡಿದ ಮೇಲೆ ನಾವು notice ಕೊಟ್ಟಿರುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಿಯಮ 69 ಕ್ಕೆ ತಾವು ನಿನ್ನೆ ಬದಲಾವಣೆ ಮಾಡಿದ ಮೇಲೆ ನಾವು ನೋಟಿಸ್ ಕೊಟ್ಟಿರುವುದು ನಾವು ಇವತ್ತು notice ಕೊಟ್ಟಿರುವುದು

ಶ್ರೀ ವಾಟಾಳ್ ನಾಗರಾಜ್ – ನೀವು ಬರಗಾಲದ ನಿಲುವಳಿ ಸೂಚನೆಯನ್ನು ನಿಯಮ 69 ಕ್ಕೆ ಬದಲಾವಣೆ ಮಾಡಿದಿರಿ ಈಗ ನಾವು ಕೋಮು ಗಲಭೆಯನ್ನು ನಿಲುವಳಿ ಸೂಚನೆಯನ್ನಾಗಿ ಕಳುಹಿಸುತ್ತಿದ್ದೇವೆ ಅದನ್ನು ತಾವು ದಯವಿಟ್ಟು ತೆಗೆದುಕೊಳ್ಳಬೇಕು

ಅಧ್ಯಕ್ಷರು – ಈ ಪ್ರಿಲಿಮನರಿ ಸಬ್‌ಮಿಷನ್ ಯಾರಾದರೂ ಒಬ್ಬರೂ ಮಾತನಾಡಿ

ಶ್ರೀ ವಾಟಾಳ್ ನಾಗರಾಜ್ – ನಾವು ಸಹಿ ಹಾಕಿರುವವರು ಎರಡೆರಡು ನಿಮಿಷ ಮಾತನಾಡುತ್ತೇವೆ

ಅಧ್ಯಕ್ಷರು – ಆಯಿತು, ಒಬ್ಬರು ಮಾತನಾಡಿ

ಶ್ರೀ ಮಲ್ಲಿಕಾರ್ಜುನ್ ಖರ್ಗೆ – ಈ ರೀತಿ ಸದನದಲ್ಲಿ ಒಬ್ಬ ರ ಮೇಲೆ ಒಬ್ಬರು ಪೈಪೋಟಿ ಮಾಡುವುದು ಸರಿಯಲ್ಲ ಬರಗಾಲದ ಬಗ್ಗೆ ಅರ್ಧ ಚರ್ಚೆಯಾಗಿದೆ ಈಗಾಗಲೇ ಅವರು ಮಾತನಾಡುತ್ತಿದ್ದಾರೆ, ನೀವು ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಮೇಲೆ ಬೇರೆ ವಿಷಯಗಳನ್ನು ತಾವು ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಏನಾಗುತ್ತದೆಂದರೆ important issues ನಲ್ಲಿ ನಾವು ನಾವೇ ಕಚ್ಚಾಡಿಕೊಂಡು ನಾಳೆ ಅದಕ್ಕೆ ಸರಿಯಾದಂಥ ಉತ್ತರ ಬರಲಿಲ್ಲವೆಂದರೆ ಏನಾಗುತ್ತದೆಂದರೆ, ಪುನ ಇದೇ ಪತ್ರಿಕೆಯಲ್ಲಿ ಬರುವುದು ಒಂದು, ನಾವು ಹೇಳುವುದು ಒಂದು ಆಗುತ್ತದೆ ಆಮೇಲೆ ಏನಾಗುತ್ತದೆಂದರೆ ಸದಸ್ಯರಿಗೆ ಆಸಕ್ತಿಯಿಲ್ಲ ಏನು ಬೇಕೋ ಅದನ್ನು ಕೇಳುತ್ತಾರೆ ಏನು ಬೇಕೋ ಅದನ್ನು ಹೇಳುತ್ತಾರೆ ಎನ್ನುವುದು ಬರುತ್ತದೆ ಅದಕ್ಕೆ ದಯವಿಟ್ಟು ಈಗ ಅರ್ಧಕ್ಕೆ ಅವರ ಭಾಷಣ ಮುಗಿದಿದೆ, ಅದನ್ನು ಅವರು ಮುಗಿಸಲಿ ಅದನ್ನು ಮುಗಿಸಿದ ನಂತರ ಏನು ಬೇಕಾದರೂ ತೆಗೆದುಕೊಳ್ಳಿ, ಈ ರೀತಿ

ಆಗುವುದು ಸರಿಯಲ್ಲ, ಯಾವ ರೀತಿಯಾಗಿ ನಡೆಯಿತು, ಯಾವ ರೀತಿಯಾಗಿ ನಡೆದಿಲ್ಲ ಎನ್ನುವುದು ನಾನು ನೋಡಿದ್ದೇನೆ ಇದು ಸರಿಯಾಗುವುದಿಲ್ಲ

ಅಧ್ಯಕ್ಷರು – ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ, ಇದು ಮುಗಿಯಲಿ ಅನಂತರ ತೆಗೆದುಕೊಳ್ಳೋಣವೆಂದು ಹೇಳಿದೆ preliminary submission ಮಾಡುವುದಾಗಿ ಹೇಳುತ್ತಾರೆ

5 ನಿಲುವಳಿ ಸೂಚನೆ ಅನುಮತಿ ಕೋರಿ ಚರ್ಚೆ

ವಿಷಯ ಬೆಂಗಳೂರು ನಗರದಲ್ಲಿ ನಡೆದ ಕೋಮು ಗಲಭೆ ಬಗ್ಗೆ

ಶ್ರೀ ಧರಂಸಿಂಗ್ (ವಿರೋಧ ಪಕ್ಷದ ನಾಯಕರು) – ಇತ್ತೀಚಿನ ದಿವಸಗಳಲ್ಲಿ ಬೆಂಗಳೂರು ನಗರದಲ್ಲಿ ಕೋಮು ಗಲಭೆಗಳಾಗಿವೆ, ಇದು ಯಾರಿಗಾದರೂ ಸಹ ಶೋಭೆ ತರತಕ್ಕಂಥದ್ದು ಅಲ್ಲ ನಾವಾಗಲಿ, ಖರ್ಗೆಯವರು, ರೋಷನ್‌ಬೇಗ್, ಸಿದ್ಧರಾಮಯ್ಯನವರು ಎಲ್ಲರೂ ಕೂಡಿ ಆಸ್ಪತ್ರೆಗೆ ಹೋಗಿ ನೋಡಿದ್ದೇವೆ ಅದರ ಬಗ್ಗೆ ಕೂಡ ನಾವು Adjournment motion ತರಬೇಕೆಂದು ವಿಚಾರ ಮಾಡಿದ್ದೆವು ಆದರೆ ಇಡೀ ರಾಜ್ಯದ ರೈತರಿಗೆ, ಜನತೆಗೆ ಸಂಬಂಧಪಟ್ಟಂತಹ ಬರ ಪರಿಸ್ಥಿತಿ ಚರ್ಚೆ ಮಾಡಬೇಕೆಂದು ನಾವು ಸಹ ಹೇಳಿದ್ದೇವೆ ನಿನ್ನೆಯೂ ಸಹ ಅದರ ಬಗ್ಗೆ ಚರ್ಚೆಯಲ್ಲಿ ನಾವೆಲ್ಲಾ ಭಾಗವಹಿಸಿದ್ದೇವೆ ಇವತ್ತು ಮಲ್ಲಿಕಾರ್ಜುನ್ ಖರ್ಗೆಯವರು, ಸಿದ್ಧರಾಮಯ್ಯನವರು ಅದರ ಬಗ್ಗೆ ಮಾತನಾಡಲಿದ್ದಾರೆ ನೀವು ಅವಕಾಶ ಕೊಡಬಾರದೆಂದಲ್ಲ, ನಾವು ಕೂಡ ಆ ವಿಷಯದ ಬಗ್ಗೆ ಮಾತನಾಡುತ್ತೇವೆ ಇವತ್ತು ಶ್ರೀರಾಮರೆಡ್ಡಿಯವರು ಹಾಗು ಇತರ ಸದಸ್ಯರು ತರತಕ್ಕಂಥ ನಾಗರಾಜ್‌ರವರ notice ಗೆ ನಾವು ಸಮ್ಮತಿಸುತ್ತೇವೆ, ಆದರೆ ಈ ವಿಷಯದ ಬಗ್ಗೆ ಚರ್ಚೆ ಮುಕ್ತಾಯವಾಗಲಿ, ಇನ್ನೂ ಹದಿನೈದು ದಿವಸಗಳ ಕಾಲ ಸದನದ ಕಾರ್ಯಕಲಾಪ ನಡೆಯುತ್ತದೆ ಹಾಗಾಗಿ ಆ ವಿಷಯದ ಬಗ್ಗೆ ಕೂಡ ಚರ್ಚೆ ಮಾಡೋಣ ಇವತ್ತು ಬರ ಪರಿಸ್ಥಿತಿ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟು ಮತ್ತೆ ಸೋಮವಾರದ ದಿವಸ ಅಧಿವೇಶನ ಸೇರಿದಾಗ ಕೋಮು ಗಲಭೆ ಬಗ್ಗೆ ಕೂಡ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಾಗ ಎಲ್ಲಾ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದಂತೆ ಆಗುತ್ತದೆ ಆಗ ರಾಜ್ಯದ ಜನತೆ ಕೂಡ ಸಂತೋಷಪಡುತ್ತಾರೆ ಶ್ರೀರಾಮರೆಡ್ಡಿಯವರು ತರತಕ್ಕಂಥ ನಿಲುವಳಿ ಸೂಚನೆ ಬಗ್ಗೆ ನಮ್ಮ ಅಭ್ಯಂತರವಿಲ್ಲ ಆದರೂ ಈ ವಿಷಯ ಕೂಡ